# ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್

**ವಿಷಯ: ಪ್ರಾತ್ಯಕ್ಷಿಕ ಮೌಲ್ಯಮಾಪನ(Acturial Valuation) ಆಧಾರದ ಮೇಲೆ ಕವಿಪ್ರನಿನಿ ಮತ್ತು ವಿಸಕಂಗಳು ಎನ್‌ಡಿಸಿಪಿಎಸ್ ವ್ಯಾಪ್ತಿಗೆ ಒಳಪಡುವ ನೌಕರರ ಕುಟುಂಬ ಪಿಂಚಣಿಯ ವಂತಿಗೆಯನ್ನು ಪಾವತಿಸುವ ಕುರಿತು.**

**ಓದಲಾಗಿದೆ:**

| | |
|---|---|
| 1 | ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06, ದಿನಾಂಕ:05.07.2007 |
| 2 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2018-19, ದಿನಾಂಕ: 19.07.2019 |
| 3 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2020-21, ದಿನಾಂಕ: 25.11.2020 |
| 4 | ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2020-21, ದಿನಾಂಕ: 25.11.2020 |
| 5 | M/s Armstrong International Consultants, Coimbatoreರವರ ವರದಿಗಳ ದಿನಾಂಕ:02.08.2022 |

**ಪ್ರಸ್ತಾವನೆ:**

1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿ ಇ ಎನ್ 2018, ದಿನಾಂಕ:23.06.2018ನ್ನು ನಿಗಮದಲ್ಲಿ ಅಳವಡಿಸಿಕೊಳ್ಳುವ ದೃಷ್ಟಿಯಿಂದ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ನೌಕರರು ಮತ್ತು ನೌಕರರ ಅವಲಂಬಿತರಿಗೆ ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ನಿವೃತ್ತಿ/ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ.

2. ದಿನಾಂಕ:01.04.2006ರಂದು ಅಥವಾ ನಂತರ ಸೇವೆಗೆ ಸೇರಿರುವ/ಸೇರುವ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸೇವೆ ಸಲ್ಲಿಸಿದ ಎಲ್ಲಾ ಅಧಿಕಾರಿ/ನೌಕರರಿಗೆ ನಿವೃತ್ತಿ ಉಪದಾನ ಸೌಲಭ್ಯವನ್ನು ಹಾಗೂ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೌಕರರ ಅವಲಂಬಿತ ಕುಟುಂಬಕ್ಕೆ ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿಯನ್ನು ಕೆಲವು ಷರತ್ತಿಗೊಳಪಟ್ಟು ಮೇಲೆ(3)ರಲ್ಲಿ ಓದಲಾದ ನಿಗಮದ ಆದೇಶದನುಸಾರ ದಿನಾಂಕ:01.04.2018ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿರುವುದನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

3. ಎನ್‌ಡಿಸಿಪಿಎಸ್ ನೌಕರರ ಉಪದಾನ ಮತ್ತು ಕುಟುಂಬ ಪಿಂಚಣಿ ಹೊಣೆಯನ್ನು (Liability) ಕಂಡು ಹಿಡಿಯಲು ಪ್ರಾತ್ಯಕ್ಷಿಕ ಮೌಲ್ಯಮಾಪನ(Actuarial Valuation) ಮಾಡಿಸಿ, ಅನುಸರಿಸಬೇಕಾದ ಕ್ರಮಗಳನ್ನು ಮೇಲೆ (4) ರಲ್ಲಿ ಓದಲಾದ ನಿಗಮದ ಆದೇಶದಲ್ಲಿ ಈ ಕೆಳಗಿನಂತೆ ಅನುಮೋದಿಸಿದೆ.

   ಅ) ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಲ್ಲಿರುವಂತೆ ಮೂಲಧನ ನಿಧಿ (Corpus Fund) ಗಾಗಿ ಬೇಕಾದ ಮೊತ್ತ ಒಂದೇ ಗಂಟಿನಲ್ಲಿ/ಮುಂಗಡವಾಗಿ ಸ್ವೀಕರಿಸುವುದು.

   ಆ) ನಿಗಮ ಮತ್ತು ಎಸ್ಕಾಂಗಳಿಂದ ಸ್ವೀಕೃತವಾಗುವ ಉಪದಾನ ಮತ್ತು ಕುಟುಂಬ ಪಿಂಚಣಿಯ ವಾರ್ಷಿಕ ವಂತಿಗೆ ದರವನ್ನು ನಿಗದಿಗೊಳಿಸುವುದು.

   ಇ) ನಿಗಮ ಮತ್ತು ಎಸ್ಕಾಂಗಳಿಂದ ನಿಗದಿತ ದಿನಾಂಕದಂದು ಪ್ರತಿ ಮಾಹೆಯ ವಂತಿಗೆ ಮೊತ್ತವನ್ನು ಸ್ವೀಕರಿಸುವುದು.

   ಈ) ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಪಾವತಿಗೆ ಸಂಬಂಧಿಸಿದಂತೆ, "Pay-as-you-go" ವಿಧಾನವನ್ನು ಅಳವಡಿಸಿಕೊಳ್ಳುವುದು.

4. 31.03.2018, 31.03.2019, 31.03.2020 ಮತ್ತು 31.03.2021ರ ಅಂತ್ಯಕ್ಕೆ ಇರುವಂತೆ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಪ್ರಾತ್ಯಕ್ಷಿಕ ಮೌಲ್ಯಮಾಪನ ಕಾರ್ಯವನ್ನು M/s Armstrong International Consultants, Coimbatore ರವರಿಗೆ ವಹಿಸಿದ್ದು, ದಿನಾಂಕ:02.08.2022ರ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಗಳಲ್ಲಿ ದಿನಾಂಕ:01.04.2018ರಲ್ಲಿ ಇರಬೇಕಾದ ಪ್ರಾರಂಭಿಕ ಶಿಲ್ಕು ಹಾಗೂ 2018-19, 2019-20 & 2020-21ನೇ ಸಾಲಿನ ಕುಟುಂಬ ಪಿಂಚಣಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕ ಮೌಲ್ಯಮಾಪನ ಲೆಕ್ಕ ಫಲಿತಾಂಶವನ್ನು ಪ್ರಸ್ತುತ ಪಡಿಸಿರುತ್ತಾರೆ. ಪ್ರಾತ್ಯಕ್ಷಿಕ ಮೌಲ್ಯಮಾಪನಕ್ಕೆ ಸಂಬಂಧಿಸಿರುವ ವರ್ಷದಿಂದಲೇ ಕುಟುಂಬ ಪಿಂಚಣಿ ವಂತಿಗೆಯನ್ನು ಆಕರಿಸುವಂತೆ ಸೂಚಿಸಿರುತ್ತಾರೆ. ಆರ್ಥಿಕ ವರ್ಷದ ಮಾರ್ಚ್ ಅಂತ್ಯಕ್ಕೆ (ಉದಾಹರಣೆಗೆ:-31.03.2021ರ ಅಂತ್ಯಕ್ಕೆ) ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಮಾಹಿತಿಯನ್ನು ಪ್ರಾತ್ಯಕ್ಷಿಕ ಮೌಲ್ಯಮಾಪಕರಿಗೆ ಒದಗಿಸಿದರೂ ಸಹ ಸಾಮಾನ್ಯವಾಗಿ ವರದಿಯಲ್ಲಿ ಶಿಫಾರಸ್ಸು ಮಾಡಲಾದ ವಂತಿಗೆ ದರಗಳನ್ನು ಅದೇ ಆರ್ಥಿಕ ವರ್ಷದ ಆರಂಭದಿಂದಲೇ (ಉದಾಹರಣೆಗೆ:-01.04.2020ರಿಂದ) ಅನುಷ್ಠಾನಗೊಳಿಸುವ ಕ್ರಮವನ್ನು ಅನುಸರಿಸಲಾಗುತ್ತದೆ.

5. ಪ್ರಾತ್ಯಕ್ಷಿಕ ಮೌಲ್ಯಮಾಪಕರ ವರದಿಗಳ ಶಿಫಾರಸ್ಸಿನನುಸಾರ ನಿಗದಿಪಡಿಸಿದ ನಿಧಿ ಮೊತ್ತ ಮತ್ತು ವಂತಿಗೆ ದರದಂತೆ ಕಂಪನಿಗಳು ವಂತಿಗೆಯನ್ನು ಟ್ರಸ್ಟ್‌ಗೆ ಪಾವತಿಸಬೇಕಾಗುತ್ತದೆ. ದಿನಾಂಕ:13.02.2015 ರವರೆಗಿನ ಸಿಬ್ಬಂದಿಗಳನ್ನು ಕವಿಪ್ರನಿನಿಯೇ ನೇಮಕ ಮಾಡಿ ವಿಸಕಂಗಳಿಗೆ ನಿಯೋಜಿಸಿದ್ದು, ಅವರುಅಂತರ ಕಂಪನಿ ವರ್ಗಾವಣೆಗೆ ಒಳಪಟ್ಟಿರುತ್ತಾರೆ. ಹಾಗಾಗಿ, ಅಲ್ಲಿಯವರೆಗಿನ ಸಿಬ್ಬಂದಿಗಳಿಗೆ ಸಂಬಂಧಿಸಿದಂತೆ ಒಂದೇ ನಿಧಿ ಎಂದು ಪರಿಗಣಿಸಿ Uniform ದರವನ್ನು ನಿಗದಿಪಡಿಸಬಹುದಾಗಿರುತ್ತದೆಯೆಂದು ಮತ್ತು ನಂತರದ ಸಿಬ್ಬಂದಿಗಳು ಕಂಪನಿಗಳಿಂದ ನೇಮಕಗೊಂಡಿದ್ದು, ಅವರು ಬೇರೆ ಕಂಪನಿಗಳಿಗೆ ವರ್ಗಾವಣೆ ಆಗುವ ಅವಕಾಶಗಳಿರುವುದಿಲ್ಲವಾದ್ದರಿಂದ, ಅವರಿಗಾಗಿ ಕಂಪನಿವಾರು ದರಗಳನ್ನು ಸೂಚಿಸಲಾಗಿರುತ್ತದೆ.

6. ದಿನಾಂಕ:30.03.2022ರಂದು ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಕುಟುಂಬ ಪಿಂಚಣಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕ ಮೌಲ್ಯಮಾಪನ ಕರಡು ವರದಿಗಳನ್ನು ಎಲ್ಲಾ ಕಂಪನಿಗಳ ಆರ್ಥಿಕ ಸಲಹೆಗಾರರಿಗೆ/ಮುಖ್ಯ ಆರ್ಥಿಕ ಅಧಿಕಾರಿಗಳಿಗೆ ಈ ಕಛೇರಿಯಿಂದ ಕಳುಹಿಸಲು ವ್ಯವಸ್ಥೆ ಮಾಡಲಾಗಿರುತ್ತದೆ. ಸದರಿ ಪತ್ರದಲ್ಲಿ ವರದಿಯಲ್ಲಿನ ಯಾವುದೇ ಅಂಶಗಳ (Assumptions) ಆತಂಕಗಳು (Apprehension) ಮತ್ತು ಇತರೆ ವಿಷಯಗಳ ಬಗ್ಗೆ ನೀಡಿರುವ ಸ್ಪಷ್ಟೀಕರಣಗಳನ್ನು ಅಭ್ಯಸಿಸಿ, ಹೆಚ್ಚಿನ ಮಾಹಿತಿ ಹಾಗೂ ಸ್ಪಷ್ಟೀಕರಣ ಬೇಕಿದ್ದಲ್ಲಿ ವಿಷಯವನ್ನು ನಿರ್ದಿಷ್ಟವಾಗಿ ವಿಶಧೀಕರಿಸಿ ಈ ಕಛೇರಿಗೆ ತಿಳಿಸಲು ಕೋರಲಾಗಿತ್ತು. ಕವಿಪ್ರನಿನಿ ಮತ್ತು ವಿಸಕಂಗಳಿಂದ ಯಾವುದೇ ಪ್ರತಿಕ್ರಿಯೆ ಇಲ್ಲದ್ದರಿಂದ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಕುಟುಂಬ ಪಿಂಚಣಿಗೆ ಸಂಬಂಧಿಸಿದ ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಗಳಲ್ಲಿನ ಶಿಫಾರಸ್ಸಿನನುಸಾರ ವಂತಿಗೆ ದರಗಳನ್ನು ಅನುಷ್ಠಾನಗೊಳಿಸಿ ಆದೇಶ ಹೊರಡಿಸಲು ಎನ್‌ಡಿಸಿಪಿಎಸ್ ಉಭಯ ಟ್ರಸ್ಟ್‌ಗಳ ಅಧ್ಯಕ್ಷರು ಹಾಗೂ ನಿರ್ದೇಶಕರು (ಆ & ಮಾಸಂ) ರವರ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಸದರಿ ವಿಷಯವನ್ನು ಮುಂದಿನ ಬೋರ್ಡ್ ಆಫ್ ಟ್ರಸ್ಟೀಸ್ ಸಭೆಯಲ್ಲಿ ಅನುಸಮರ್ಥನೆಗಾಗಿ ಮಂಡಿಸಲಾಗುವುದು.

7. ಮೇಲಿನ ಕಂಡಿಕೆ-6ರ ಹಿನ್ನೆಲೆಯಲ್ಲಿ, ಸಿಬ್ಬಂದಿಗಳಿಗೆ ದಿನಾಂಕ:25.11.2020ರ ನಿಗಮದ ಆದೇಶದನುಸಾರ ಎಲ್ಲಾ ಕಂಪನಿಯ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಕುಟುಂಬ ಪಿಂಚಣಿ ವಂತಿಗೆಯ ನಿಧಿ ಮತ್ತು ದರಗಳನ್ನು ಸೂಚಿಸಿ ಈ ಆದೇಶ.

**ಆದೇಶ ಸಂಖ್ಯೆ: ಎನ್‌ಡಿಸಿಪಿಎಸ್‌ಎಫ್‌ಪಿಜಿಟಿ/ಎಫ್6/2022-23/ಸಿವೈಎಸ್- 04**

**ಬೆಂಗಳೂರು, ದಿನಾಂಕ: 12 AUG 2022**

ಮೇಲೆ ವಿವರಿಸಿದ ಸಂದರ್ಭಗಳ ಹಿನ್ನೆಲೆಯಲ್ಲಿ, ದಿನಾಂಕ:01.04.2006 ಮತ್ತು ತದನಂತರ ನೇಮಕಗೊಂಡ ಎನ್‌ಡಿಸಿಪಿಎಸ್ ಯೋಜನೆಯ ವ್ಯಾಪ್ತಿಗೆ ಒಳಪಡುವ ಸಿಬ್ಬಂದಿಗಳಿಗೆ ಸಂಬಂಧಪಟ್ಟಂತೆ, ಕವಿಪ್ರನಿನಿ ಮತ್ತು ವಿಸಕಂಗಳು ಪಾವತಿಸಬೇಕಾದ, ಕುಟುಂಬ ಪಿಂಚಣಿ ವಂತಿಗೆಯ ನಿಧಿ/ದರಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ.

| **I. ಎನ್‌ಡಿಸಿಪಿಎಸ್ ನೌಕರರಿಗೆ ಸಂಬಂಧಿಸಿದ ಕುಟುಂಬ ಪಿಂಚಣಿಯ ಆರಂಭಿಕ ಶಿಲ್ಕು** | | |
|---|---|---|
| ದಿನಾಂಕ:01.04.2018ಕ್ಕೆ ಆರಂಭಿಕ ಶಿಲ್ಕು(Corpus Fund) | | |
| ಕಂಪನಿ | ದಿನಾಂಕ: 13.02.2015ರವರೆಗೆ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ಸಿಬ್ಬಂದಿಗಳಿಗೆ | ದಿನಾಂಕ: 13.02.2015ರ ನಂತರ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ಸಿಬ್ಬಂದಿಗಳಿಗೆ |
| **ಬೆವಿಕಂ** | 1,30,99,134 | 26,80,809 |
| **ಚಾವಿಸನಿ** | 51,53,511 | 3,47,224 |
| **ಗುವಿಕಂ** | 57,96,093 | 4,45,733 |
| **ಹುವಿಕಂ** | 72,62,436 | 10,51,234 |
| **ಕವಿಪ್ರನಿನಿ** | 1,31,88,809 | 31,21,126 |
| **ಮವಿಕಂ** | 40,46,460 | 12,50,658 |
| **ಪಿಸಿಕೆಎಲ್** | 52,460 | - |
| **ಒಟ್ಟು** | **4,85,98,904** | **88,96,785** |

| II. ಎನ್‌ಡಿಸಿಪಿಎಸ್ ನೌಕರರಿಗೆ ಸಂಬಂಧಿಸಿದ ಕುಟುಂಬ ಪಿಂಚಣಿ ವಂತಿಗೆದರ | | | |
|---|---|---|---|
| ಮೂಲ ವೇತನ + ಡಿಯರ್‌ನೆಸ್ ಪೇ + ತುಟ್ಟಿ ಭತ್ಯೆ ಮೇಲೆ ಕುಟುಂಬ ಪಿಂಚಣಿ ವಂತಿಗೆ | | | |
| ವರ್ಷ | | ದಿನಾಂಕ: 13.02.2015ರವರೆಗೆ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ಸಿಬ್ಬಂದಿಗಳಿಗೆ | ದಿನಾಂಕ: 13.02.2015ರ ನಂತರ ನೇಮಕಗೊಂಡಿರುವ ಎನ್‌ಡಿಸಿಪಿಎಸ್ ಸಿಬ್ಬಂದಿಗಳಿಗೆ |
| ರಿಂದ | ವರೆಗೆ | | |
| 1.04.2018 | 31.03.2019 | 0.51% | 0.52% |
| 1.04.2019 | 31.03.2020 | 0.52% | 0.54% |
| 1.04.2020ರಿಂದ ಮುಂದಕ್ಕೆ | | 0.49% | 0.51% |

- ಮೌಲ್ಯ ಮಾಪಕರ ವರದಿಗಳಲ್ಲಿ (ಪುಟ ಸಂಖ್ಯೆ-9) ಕಂಪನಿವಾರು ಕುಟುಂಬ ಪಿಂಚಣಿ ವಂತಿಗೆ ದರಗಳಲ್ಲಿ ಅತ್ಯಂತ ಕಡಿಮೆ(**Below1%**) ವ್ಯತ್ಯಾಸ ಬಂದಿರುವುದರಿಂದ, ಎಲ್ಲಾ ಕಂಪನಿಗಳಿಗೆ ಒಂದೇ **(Uniform)** ದರಗಳನ್ನು ನಿಗದಿ ಪಡಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಪ್ರಾತ್ಯಕ್ಷಿಕ ಮೌಲ್ಯಮಾಪನ ವರದಿಯ ಶಿಫಾರಸ್ಸಿನನ್ವಯ ವರ್ಷವಾರು ವಂತಿಗೆದರ ಲೆಕ್ಕಾಚಾರ ಮಾಡಲು ಈ ಕೆಳಗಿನ ಕ್ರಮ ಅನುಸರಿಸಬಹುದಾಗಿರುತ್ತದೆ.

1) ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಟ್ರಸ್ಟ್‌ಗೆ ಮೌಲ್ಯಮಾಪಕರ ಶಿಫಾರಸ್ಸಿನ ದರದನ್ವಯ ವರ್ಷವಾರು ವಂತಿಗೆ ಪಾವತಿಸಲು 13.02.2015ಕ್ಕೂ ಹಿಂದೆ ಮತ್ತು 13.02.2015ರ ನಂತರ ನೇಮಕಾತಿ ಹೊಂದಿರುವ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ವಿವರಗಳನ್ನು ಕ್ರೋಢೀಕರಿಸಿ ಮೌಲ್ಯಮಾಪಕರು ಶಿಫಾರಸ್ಸು ಮಾಡಿರುವ ದರದನ್ವಯ ವಂತಿಗೆ ಮೊತ್ತವನ್ನು ಲೆಕ್ಕಾಚಾರ ಮಾಡುವ ಸಲುವಾಗಿ ಸದರಿ ವಿವರಗಳನ್ನು ತಯಾರಿಸಿಟ್ಟುಕೊಳ್ಳುವುದು.
2) ಈ ರೀತಿ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಕ್ರೋಢೀಕರಿಸಿದ ವಿವರಗಳು ವರ್ಷವಾರು ಮೂಲ ವೇತನ+ಡಿಪಿ+ತುಟ್ಟಿ ಭತ್ಯೆ ಮೇಲೆ ಮೌಲ್ಯಮಾಪಕರು ಶಿಫಾರಸ್ಸು ಮಾಡಿರುವ ವಂತಿಗೆ ದರವನ್ನು ಪರಿಗಣಿಸಿ, ಕುಟುಂಬ ಪಿಂಚಣಿ ವಂತಿಗೆಯನ್ನು ಲೆಕ್ಕಹಾಕುವ ಕ್ರಮ ವಹಿಸುವುದು ಹಾಗೂ ಆರ್ಥಿಕ ವರ್ಷದ ವಾರ್ಷಿಕ ವರದಿಯನುಸಾರ ಎನ್‌ಡಿಸಿಪಿಎಸ್ ಸಿಬ್ಬಂದಿಗಳ ಮೂಲವೇತನ+ಡಿಪಿ+ತುಟ್ಟಿ ಭತ್ಯೆಗೆ ತಾಳೆ ಮಾಡಿಕೊಳ್ಳುವುದು.
3) ಕವಿಪ್ರನಿನಿ/ವಿಸಕಂಗಳ ಟ್ರಸ್ಟ್‌ಗೆ ಹಳೇ ಪಿಂಚಣಿ ಪದ್ಧತಿಗೆ ಒಳಪಡುವ ಸಿಬ್ಬಂದಿಗಳ ಉಪದಾನ ಮತ್ತು ಕುಟುಂಬ ಪಿಂಚಣಿಯ ಮಾಸಿಕ ವಂತಿಗೆಯನ್ನು ಪಾವತಿಸಲು ಸಹಾಯವಾಗಲು ಅಭಿವೃದ್ಧಿ ಪಡಿಸಿಕೊಂಡಿರುವ ಕವಿಪ್ರನಿನಿ ಜಾಲತಾಣದ ತಂತ್ರಾಂಶದ ರೀತಿಯಲ್ಲಿಯೇ ಕವಿಪ್ರನಿನಿ/ವಿಸಕಂಗಳು ಸೂಕ್ತ ವ್ಯವಸ್ಥೆ ಮಾಡಿಕೊಂಡಲ್ಲಿ ಎನ್‌ಡಿಸಿಪಿಎಸ್ ಟ್ರಸ್ಟ್‌ಗೆ ಉಪದಾನ ಮತ್ತು ಕುಟುಂಬ ಪಿಂಚಣಿ ವಂತಿಗೆಯನ್ನು ಪಾವತಿಸಲು ಲೆಕ್ಕಾಚಾರಕ್ಕೆ ಅನುಕೂಲವಾಗುತ್ತದೆ.

ಮೇಲೆ ತಿಳಿಸಿದಂತೆ, ಕುಟುಂಬ ಪಿಂಚಣಿ ವಂತಿಗೆ ದರಗಳನ್ವಯ, ಕವಿಪ್ರನಿನಿ ಮತ್ತು ವಿಸಕಂಗಳು ತಾವು ಪಾವತಿಸಬೇಕಾದ ವಂತಿಗೆ ಮೊತ್ತವನ್ನು ಲೆಕ್ಕ ಹಾಕಿ ಟ್ರಸ್ಟ್ ಕಛೇರಿಗೆ ವಿವರಗಳನ್ನು ಅತೀ ಜರೂರು ಸಲ್ಲಿಸುವುದು.

**ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಟ್ರಸ್ಟ್‌ನ ಬ್ಯಾಂಕ್ ಉಳಿತಾಯ ಖಾತೆಯನ್ನು ತೆರೆದು ಮತ್ತು ಆದಾಯ ತೆರಿಗೆ ಇಲಾಖೆಯ ಅನುಮತಿ ಪಡೆದ ನಂತರ ಕವಿಪ್ರನಿನಿ/ವಿಸಕಂಗಳಿಗೆ ಸದರಿ ಟ್ರಸ್ಟ್‌ಗಳ ವತಿಯಿಂದ ಪ್ರತ್ಯೇಕ ಆದೇಶ ನೀಡಿದ ನಂತರ ಕುಟುಂಬ ಪಿಂಚಣಿ ವಂತಿಗೆ ಮೊತ್ತವನ್ನು ಟ್ರಸ್ಟ್‌ಗೆ ಪಾವತಿಸುವ ಕ್ರಮ ವಹಿಸುವುದು.**

ಆದೇಶದ ಮೇರೆಗೆ,

(ಹೆಚ್.ಆರ್ ಶ್ರೀಪಾದರಾವ್)
ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

ನಿರ್ದೇಶಕರು (ಆ ಮತ್ತು ಮಾ.ಸಂ), ಕವಿಪ್ರನಿನಿ ಮತ್ತು ಅಧ್ಯಕ್ಷರು (ಎನ್‌ಡಿಸಿಪಿಎಸ್ ಕು ಪಿಂ & ಉ ಟ್ರಸ್ಟ್) ರವರಿಂದ ಅನುಮೋದಿಸಿದೆ.

<u>ಪ್ರತಿದಯಾಪರ ಅವಗಾಹನೆಗಾಗಿ:</u>

1. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಕಾವೇರಿ ಭವನ ಬೆಂಗಳೂರು ರವರ ಹಿರಿಯ ಆಪ್ತ ಕಾರ್ಯದರ್ಶಿ.

2. ನಿರ್ದೇಶಕರು (ಹಣಕಾಸು), ಕವಿಪ್ರನಿನಿ ಮತ್ತು ಅಧ್ಯಕ್ಷರು, ಪಿಂಚಣಿ ಮತ್ತು ಉಪದಾನ ಟ್ರಸ್ಟ್ ರವರ ಹಿರಿಯ ಆಪ್ತ ಕಾರ್ಯದರ್ಶಿ.
3. ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ/ಮವಿಕಂ/ಹುವಿಕಂ/ಗುವಿಕಂ/ಚಾವಿಸನಿ ರವರ ಹಿರಿಯ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು (ಆಡಳಿತ & ಮಾ ಸಂ), ಕವಿಪ್ರನಿನಿ, ಕಾವೇರಿ ಭವನ ಬೆಂಗಳೂರು ರವರ ಹಿರಿಯ ಆಪ್ತ ಕಾರ್ಯದರ್ಶಿ.
5. ನಿರ್ದೇಶಕರು (ವಾಣಿಜ್ಯ) ಪಿಸಿಕೆಎಲ್‌ರವರ ಹಿರಿಯ ಆಪ್ತ ಕಾರ್ಯದರ್ಶಿ.
6. ನಿರ್ದೇಶಕರು (ಹಣಕಾಸು) ಹಾಗೂ ಮುಖ್ಯ ಆರ್ಥಿಕ ಅಧಿಕಾರಿ, ಹುವಿಕಂ.
7. ಆರ್ಥಿಕ ಸಲಹೆಗಾರರು (ಲೆ & ಸಂ) /ಎನ್‌ಡಿಸಿಪಿಎಸ್, ಕವಿಪ್ರನಿನಿ, ಮುಖ್ಯ ಪ್ರಧಾನ ವ್ಯವಸ್ಥಾಪಕರು (ಹ & ವಾ) ಬೆವಿಕಂ, ಮುಖ್ಯ ಆರ್ಥಿಕ ಅಧಿಕಾರಿ, ಮವಿಕಂ/ಗುವಿಕಂ/ಚಾವಿಸನಿ.

<u>ಪ್ರತಿ ಮಾಹಿತಿಗಾಗಿ</u>

1. ನಿರ್ದೇಶಕರು (ಸುಧಾರಣೆ) (ಇಂಧನ ಇಲಾಖೆ). ಕರ್ನಾಟಕ ಸರ್ಕಾರ ಬೆಂಗಳೂರು ಹಾಗೂ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಟ್ರಸ್ಟಿ.
2. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಬೆಂಗಳೂರು.
3. ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ನೊಂದಣಿ ಸಂಖ್ಯೆ 659) ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
4. ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ನೌಕರರ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಇಂಜಿನಿಯರುಗಳ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
10. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮ ಇಂಜಿನಿಯರುಗಳ ಸಂಘ, ಬೆಂಗಳೂರು.
11. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.

<u>ಪ್ರತಿ ಸೂಕ್ತ ಕ್ರಮಕ್ಕಾಗಿ</u>

1. ನಿಯಂತ್ರಣಾಧಿಕಾರಿ (ಹಣಕಾಸು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕರು (ಸಿಬ್ಬಂದಿ-1 &2)/ (ಆಂತರಿಕ ನಿರ್ವಹಣೆ), ಕವಿಪ್ರನಿನಿ ಕಾವೇರಿ ಭವನ, ಬೆಂಗಳೂರು.
3. ಲೆಕ್ಕಾಧಿಕಾರಿ (ಪಿಂಚಣಿ/ಪಿಂಚಣಿ ಕೋಶ), ಕವಿಪ್ರನಿನಿ/ಬೆವಿಕಂ/ಮವಿಕಂ/ಹುವಿಕಂ/ಗುವಿಕಂ/ಚಾವಿಸನಿ. ಮುಖ್ಯ ಕಡತ.